**ದಿನಾಂಕಃ 11.03.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎನ್ ವಕೀಲರಿಂದಃ-

ನಿಪಿ-3 ರಲ್ಲಿರುವ ವಿವರಗಳು ಸರಿ ಇರುತ್ತದೆ. ಸಾಕ್ಷಿ ಮುಂದುವರೆದು ಪಶ್ಚಿಮ ಭಾಗದಲ್ಲಿ ಖಾಸಗಿ ಸ್ವತ್ತು ಎಂದು ತಪ್ಪಾಗಿ ನಮೂದು ಇದ್ದು ಅದು ಹಿತ್ತಲು ಎಂದು ನಮೂದಾಗಬೇಕಿತ್ತು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ಅಂಶಗಳು ಸರಿ ಇರುತ್ತದೆ ಎಂದರೆ ಸರಿ. ನಿಪಿ-1 ರ ಚಕ್ಕುಬಂದಿಯಲ್ಲಿ ನಮೂದಾಗಿರುವ ಚಕ್ಕಬಂಧಿಯನ್ನೇ ನಿಪಿ-3 ರಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಮನೆ ನಿರ್ಮಾರ್ಣ ಪರವಾನಗಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಯಾವ ಸಾಲಿನಲ್ಲಿ ಮನೆ ನಿರ್ಮಾಣ ಪರವಾನಗಿಯನ್ನು ಪಡೆದಿರುತ್ತೇನೆ ಎಂದು ನೆನಪಿಲ್ಲ. ಮನೆಯನ್ನು 1995-96 ರಲ್ಲಿ ಕಟ್ಟಿರಬಹುದು. ನಿಪಿ-1 ಮತ್ತು 3 ರಲ್ಲಿರುವ ಚಕ್ಕುಬಂದಿ ಆಧಾರದ ಮೇಲೆ ದಾವಾ ಹೂಡಿರುತ್ತೇವೆ ಎಂದರೆ ಸಾಕ್ಷಿ ನಿಪಿ-1 ಮತ್ತು 3 ರಲ್ಲಿರುವ ಚಕ್ಕುಬಂಧಿಯನ್ನು ಸರಿಪಡಿಸಿಕೊಳ್ಳಲು ಈ ದಾವೆ ಹೂಡಿರುತ್ತೇವೆ ಎಂದು ನುಡಿಯುತ್ತಾ್ರರೆ. ನಿಪಿ-1, 3 ರ ಚಕ್ಕುಬಂಧಿ ಹಾಗೂ ದಾವಾ ಆಸ್ತಿಯ ಚಕ್ಕುಬಂಧಿ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿ.

ಪ್ರತಿವಾದಿಯು ಸಲ್ಲಿಸಿರುವ ಅರ್ಜಿಯ ಮೇರೆಗೆ ಪುರಸಭೆಯವರು ನನ್ನ ಗಂಡ ಮನೆ ನಿರ್ಮಿಸಲು ಯಾವುದೇ ಪರವಾನಗಿ ಪಡೆದಿರುವುದಿಲ್ಲ ಎಂಬ ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈ ಹಿಂದೆ ನಾನು ನಮ್ಮ ಮನೆ ಹಿಂಭಾಗ ಚರಂಡಿ ನಿರ್ಮಾಣ ಮಾಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚರಂಡಿಯನ್ನು ಯಾರು ನಿರ್ಮಾಣ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿ ನಿರ್ಮಾಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ದಕ್ಷಿಣ ಭಾಗದ ಗೋಡೆಗೆ ಲಗತ್ತಾಗಿ 3 ಅಡಿ ಅಗಲ 70 ಅಡಿ ಉದ್ದದ ಚರಂಡಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಚರಂಡಿಯನ್ನು ಪುರಸಭೆಯವರೇ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪುರಸಭೆಯವರು ಚರಂಡಿಯನ್ನು ತಾವೇ ನಿರ್ಮಿಸಿರುವ ಬಗ್ಗೆ ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.